ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ -19

5ನೇ ವರ್ಷ 18ನೇ ಸಂಚಿಕೆ ಕೊಪ್ಪ 11-1-1987 ಭಾನುವಾರ ಬೆಲೆ 30 ಪೈಸೆ

"ಆರ್.ಎಂ.ಸಿ. ಬೆಳೆಗಾರರ ಹಿತ ಬಲಿಕೊಡದು"

ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರು ಕಟ್ಟೆ ಸಮಿತಿಯ ವ್ಯಾಪ್ತಿಯಲ್ಲಿನ ಎಲ್ಲ ಅಡಿಕೆ ಬೆಳೆಗಾರರು ಮತ್ತು ಮಾರಾಟಗಾರರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಸಮಿತಿಯ ವ್ಯಾಪ್ತಿಯಲ್ಲಿ ವ್ಯವಹರಿಸುವ ಲೈಸನ್ಸ್ ಪಡೆದ ಅಡಿಕೆ ಖರೀದಿದಾರರು ಏಕಪಕ್ಷೀಯವಾಗಿ ಅಡಿಕೆ ವ್ಯಾಪಾರವನ್ನು ದಿನಾಂಕ: 1.1.1987ರಿಂದ ಸ್ಥಗಿತಗೊಳಿಸಿರುವುದರಿಂದ, ಈ ಸಮಿತಿಯ ಪ್ರಾಂಗಣದಲ್ಲಿ ವ್ಯವಹರಿಸುವ ಸಹಕಾರ ಸಂಸ್ಥೆಗಳಾದ ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ (ಮ್ಯಾಮ್‌ಕೋಸ್) ಹಾಗೂ ಕ್ಯಾಂಪ್‌ಕೊ ಗಳಲ್ಲಿ ಪ್ರತಿನಿತ್ಯ ವ್ಯಾಪಾರ ವಹಿವಾಟು ನಡೆಸುವಂತೆ ಮತ್ತು ಖರೀದಿದಾರರಾಗಿ ಕ್ಯಾಂಪ್ಕೋ ಸಂಸ್ಥೆಯವರು ಖರೀದಿ ವಹಿವಾಟುಗಳಲ್ಲಿ ಭಾಗವಹಿಸಿ ಖರೀದಿಸುವಂತೆ ವಿನಂತಿಸಿ ಏರ್ಪಾಡು ಮಾಡಲಾಗಿದೆ.

ಸದ್ಯದ ಪರಿಸ್ಥಿತಿಯಲ್ಲಿ ರೈತ ಬಾಂಧವರ ಹಿತಾಸಕ್ತಿಗಳನ್ನು ಗಮನಿಸಿ ಮಾಡಲಾಗಿರುವ ಈ ಏರ್ಪಾಡನ್ನು ರೈತ ಬಾಂಧವರೆಲ್ಲರೂ ಸದುಪಯೋಗಿಸಿ ಕೊಳ್ಳುವಂತೆ ಸಮಿತಿಯ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ

ಇದಲ್ಲದೆ, ವರ್ತಕ ಸಮುದಾಯದ ತೀವ್ರ ರೀತಿಯ ಶೋಷಣೆಯಿಂದ ಬಿಡುಗಡೆಗೊಂಡು ಗೌರವವನ್ನೂ, ಆರ್ಥಿಕ ಲಾಭವನ್ನೂ ಪಡೆದುಕೊಳ್ಳಲು ರೈತರಿಗೆ ನೆರವಾಗಲು ಹಲವು ವಿಧದಲ್ಲಿ ಸಮಿತಿಯು ಯತ್ನಿಸುತ್ತಿದ್ದು, ಹಲವಾರು ಗಹನವಾದ ಸುಧಾರಣೆಗಳನ್ನು ಮಾಡಿದೆ. ಅಂಥ ಸಂದರ್ಭಗಳಲ್ಲಿ ರೈತರಿಗೆ ಎದುರಾಗುವ ತೊಡಕುಗಳ ನಿವಾರಣೆಗೂ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಉದಾ: ಮಾರುಕಟ್ಟೆ ಪ್ರಾಂಗಣಕ್ಕೂ ಮುಖ್ಯ ಬಸ್ ನಿಲ್ದಾಣಕ್ಕೂ ಮಧ್ಯೆ ಸಮಿತಿಯ ಸ್ವಂತ ಟೆಂಪೋ ಟ್ರ್ಯಾಕ್ಸ್ ಓಡಾಟ, ಪ್ರಾಂಗಣದ ಕೆನರಾ ಬ್ಯಾಂಕ್ ಶಾಖೆ ಸಂಜೆ 5 ಗಂಟೆಯವರೆಗೆ ವ್ಯವಹಾರ

(2ನೇ ಪುಟಕ್ಕೆ)

ಕೊಪ್ಪಕ್ಕೆ ಲಯನ್ಸ್ ಜಿಲ್ಲಾ ಗೌರ್ನರ್ ಭೇಟಿ

ಕೊಪ್ಪ: ಲಯನ್ಸ್ ಜಿಲ್ಲಾ ಗೌರ್ನರ್ ಬಿ ವಿ. ಹೆಗ್ಡೆ ಜ. 4ರಂದು ಇಲ್ಲಿನ ಲಯನ್ಸ್ ಕ್ಲಬ್ಬಿಗೆ ಅಧಿಕೃತ ಭೇಟಿ ನೀಡಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಸರ್ಕಾರಿ ಆಸ್ಪತ್ರೆಗೆ ಸ್ಟ್ರೆಚರ್ ನೀಡಿಕೆ, ರೋಗಿಗಳಿಗೆ ಲಯನ್ಸ್ ಲೇಡೀಸ್‌ನಿಂದ ಹಣ್ಣು ವಿತರಣೆ, ತೋಟಗಾರಿಕೆ, ಜಾನುವಾರು ಮತ್ತು ರಂಗೋಲಿ ಸ್ಪರ್ಧೆಗಳು, ಲೈಬ್ರೆರಿಗಳಿಗೆ ಪುಸ್ತಕ ನೀಡಿಕೆ ಹಾಗೂ ಕುದುರೆಗುಂಡಿಯಲ್ಲಿ ಶಿಶು ಪ್ರದರ್ಶನ ಮುಂತಾದ ಕಾರ್ಯಕ್ರಮಗಳು ನಡೆದವು

ನೆಹರು ಯುವಕ ಕೇಂದ್ರದಿಂದ ಚರ್ಚಾಸ್ಪರ್ಧೆ, ಕಿರಿಯರ ವಾಲಿಬಾಲ್ ಪಂದ್ಯಗಳು

ಚಿಕ್ಕಮಗಳೂರು: ವಿವೇಕಾನಂದರ ಜನ್ಮದಿನವನ್ನು ರಾಷ್ಟ್ರೀಯ ಯುವದಿನವಾಗಿಯೂ ಅನಂತರದ ವಾರವನ್ನು ಯುವ ಸಪ್ತಾಹವನ್ನಾಗಿಯೂ ಆಚರಿಸುತ್ತಿರುವ ಸಂದರ್ಭದಲ್ಲಿ ಇಲ್ಲಿನ ನೆಹರೂ ಯುವಕ ಕೇಂದ್ರವು ಜ. 17ರಂದು ಚಿಕ್ಕಮಗಳೂರಿನಲ್ಲಿ ಜಿಲ್ಲಾ ಮಟ್ಟದ ಕಿರಿಯರ ವಾಲಿಬಾಲ್ ಪಂದ್ಯವನ್ನೂ, 1. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ, 2. ಕಿರಿಯ ಕಾಲೇಜು, ಪಾಲಿಟೆಕ್ನಿಕ್ ಇತ್ಯಾದಿ, 3. ಪ್ರ.ದ. ಕಾಲೇಜು, ಸಾರ್ವಜನಿಕರು ಇತ್ಯಾದಿ – ಹೀಗೆ 3 ವಿಭಾಗಗಳಲ್ಲಿ ಜಿಲ್ಲಾ ಮಟ್ಟದ ಚರ್ಚಾಸ್ಪರ್ಧೆಯನ್ನೂ ಏರ್ಪಡಿಸಿದೆ. ವಾಲಿಬಾಲ್ ಪಂದ್ಯಕ್ಕೆ ಜ. 15ರೊಳಗೆ ಹಾಗೂ ಚರ್ಚಾಸ್ಪರ್ಧೆಗಳಿಗೆ ಜ. 16ರೊಳಗೆ ಪ್ರವೇಶಗಳನ್ನು ಕಳಿಸಬೇಕಾಗಿದೆ.

ತೆಂಗು ಹರಳು ಉದುರುವಿಕೆ ಹತೋಟಿ

ಮಲೆನಾಡಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ವ್ಯಾಪಕವಾಗಿ ಬೆಳೆಯುತ್ತಿರುವ ವಾಣಿಜ್ಯ ಬೆಳೆಗಳಲ್ಲಿ ತೆಂಗೂ ಒಂದು. ಬಹು ಉಪಯೋಗಿಯಾಗಿರುವ ತೆಂಗಿಗೆ 'ಕಲ್ಪವೃಕ್ಷ' ಎಂಬ ಹೊಗಳಿಕೆ ಸಾರ್ಥಕವಾದುದು.

ತೆಂಗಿಗೆ ಬರುವ ಅನೇಕ ರೋಗಗಳಲ್ಲಿ ಹರಳು ಉದುರುವಿಕೆಯೂ ಒಂದು. ಇದಕ್ಕೆ ಇರುವ ಅನೇಕ ಕಾರಣಗಳಲ್ಲಿ ಮುಖ್ಯವಾದುವು ಎಂದರೆ ಹೂವುಗಳಲ್ಲಿ ಕೆಲವು ಅಣಬೆ ಜಾತಿಯ ಸಸ್ಯಗಳು (ಶಿಲೀಂಧ್ರಗಳು) ರೋಗವನ್ನುಂಟು ಮಾಡುವುದು, ಕೆಲವು ಬಗೆಯ ಕ್ರಿಮಿಕೀಟಗಳು ಹೂವುಗಳಿಗೆ ಹಾನಿ ಉಂಟುಮಾಡುವುದು, ವಾತಾವರಣದ ವೈಪರೀತ್ಯ, ಹೂವಿನಲ್ಲಿರುವ ಲೋಪ ದೋಷಗಳು ಇತ್ಯಾದಿಗಳು. ಅಲ್ಲದೆ ಕೆಲವು ಮರಗಳು ಕಡಿಮೆ ಫಲಗಳನ್ನು ಮಾತ್ರ ಹೊಂದುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಅಂತಹ ಸಂದರ್ಭಗಳಲ್ಲಿ ಹರಳು ಉದುರುವಿಕೆ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಕೆಲವು ಸಂದರ್ಭಗಳಲ್ಲಿ ಶೇ. 60ರಿಂದ 95ರಷ್ಟು ನಷ್ಟ ಉಂಟಾಗುತ್ತದೆ. ದಕ್ಷಿಣ ಕೇರಳದ ಕೆಲವು ಸ್ಥಳಗಳಲ್ಲಿ ಹುಳುಗಳ ಬಾಧೆಯಿಂದ ಈ ಹರಳು ಉದುರುವಿಕೆ ವ್ಯಾಪಕವಾಗಿ ಹರಡುತ್ತಿದೆ. ಕರ್ನಾಟಕದಲ್ಲೂ ಅಲ್ಲಲ್ಲಿ ಕಾಣಿಸಿಕೊಂಡ ಹರಳು ಉದುರುವಿಕೆಗೆ ಈ ಹುಳುಗಳು ಕಾರಣವಾಗಿರಬಹುದು.

ಈ ಹರಳು ಉದುರುವಿಕೆಯನ್ನು ತಡೆಯಲು ರೈತರು ಅನೇಕ ಕ್ರಮಗಳನ್ನು ಕೈಗೊಂಡಿದ್ದಾರೆ. ಮತ್ತು ಅವುಗಳ ಬಗ್ಗೆ ಪ್ರಯೋಗ ನಡೆಯುತ್ತಿದೆ. ಬೇಸಿಗೆಯಲ್ಲಿ ಭೂಮಿಯ ತೇವಾಂಶವನ್ನು ಕಾಯ್ದಿಡುವುದು, ಗಾಳದಲ್ಲಿ ನೀರು ನಿಂತು ಜೌಗು ಉಂಟಾಗುವುದನ್ನು ತಡೆಯುವುದು, ಇತ್ಯಾದಿ. ಕ್ಲಿಪ್ತ ಕಾಲದಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯಿಂದಲೂ ಪ್ರಯೋಜನವಾಗಬಲ್ಲದು.

ಕೆಲವು ಬಗೆಯ ಕ್ರಿಮಿಗಳು ಹೂವಿನ ತೊಟ್ಟುಗಳಲ್ಲಿ ಕುಳಿತು ಅವುಗಳ ಮೂಲಕ ರಸ ಹೀರಿ ಹೂವನ್ನು ನಿಃಸತ್ವವಾಗಿ ಮಾಡುತ್ತವೆ. ಹೀಗಾಗಿ ಕೆಲವು ಸಂದರ್ಭಗಳಲ್ಲಿ 2–3 ತಿಂಗಳು ಬೆಳೆದ ಹರಳುಗಳು ಕೂಡಾ ಉದುರಲು ಕಾರಣವಾಗುತ್ತದೆ.

ಇದಕ್ಕೆ '0.2% ಕಾರ್ಬೋರಿಲ್' ಅಥವಾ 'ಎಂಡೋ ಸಲ್ಫಾನ್ 0.05%' ಇದನ್ನು ಹೊಸದಾಗಿ ಅರಳಿದ ಹೂ ಗೊಂಚಲುಗಳ ಮೇಲೆ ಪರಾಗಸ್ಪರ್ಶ ಕ್ರಿಯೆ… ನಂತರ ಸಿಂಪರಣೆ ಮಾಡುವುದರಿಂದ … ಯ ಬಹುದು. ಈ ಕ್ರಿಮಿನಾಶಕಗಳ ಬ… ಯಿಂದ ರಸ ಹೀರುವ ಕೀಟಗಳು ಹತೋ… ಗೆ ಬರುತ್ತವೆ.

ಇವಲ್ಲದೆ ಪ್ರಮಾಣಬದ್ಧವಾದ ಸೂ… ರಾಸಾಯನಿಕಗಳ ಬಳಕೆ, ನೀರಾವರಿ ಇ… ಹೆಚ್ಚಿನ ಇಳುವರಿ ಪಡೆಯುವಲ್ಲಿ ಮುಖ… ಪಾತ್ರವನ್ನು ವಹಿಸುತ್ತವೆ.

ಕೃಪೆ: ದಿ ಹಿಂದೂ

ಅನುವಾದ: ನವಿಲೂರು ಪ್ರಕಾಶ್

ಕುಟುಂಬ ಯೋಜನೆ ಶಿಬಿರ

ಚಿಕ್ಕಮಗಳೂರು: ಜ. 24ರಂದು ಬಸರಿಕಟ್ಟೆ, ಉತ್ತಮೇಶ್ವರ, ಬಾಳೆಹೊನ್ನೂರು, 28ರಂದು ಶೃಂಗೇರಿ, 29ರಂದು ಜಯಪುರ, ಕೊಪ್ಪಗಳಲ್ಲಿ ಕುಟುಂಬ ಯೋಜನೆ ಶಸ್ತ್ರಚಿಕಿತ್ಸಾ ಶಿಬಿರಗಳು ನಡೆಯುತ್ತವೆ.

ಇಡೀ ಕ್ಷೇತ್ರದ ಪ್ರತಿನಿಧಿ — ಒಂದು ಮಾದರಿ

ಚಿಕ್ಕಮಗಳೂರಿಗೆ ಸಮೀಪದ ಕೂ… ವಳ್ಳಿಯಲ್ಲಿ ಮಂಡಲ ಪಂಚಾಯ್ತಿಗೆ … ಜನ ಅಭ್ಯರ್ಥಿಗಳು ನಾಮಪತ್ರ ಸಲ್ಲಿ… ದ್ದರು. ಆದರೆ ರಾಜಕೀಯ ಪಕ್ಷಗ… ಕಿತ್ತಾಟದಿಂದ ಬೇಸತ್ತ ಗ್ರಾಮಸ್ಥರು … ಲಾಟರಿ ಮೂಲಕ ತಮ್ಮ ಪ್ರತಿನಿಧಿಯ… ನ್ನು ಆರಿಸುವುದೆಂದೂ, ಯಾರೇ ಗೆದ್ದರು… ತಮ್ಮ ಪಕ್ಷದ ಹೆಸರು ಹೇಳದೆ ಪಕ್ಷೇತ… ರನಾಗಿಯೇ ಉಳಿಯಬೇಕೆಂದೂ, ಒಕ್ಕೊ… ರಲಿನ ನಿರ್ಧಾರ ಕೈಗೊಂಡು ಲಾಟ… ಎತ್ತಿದರು.

ಕೆ. ಭವಾನಿಶಂಕರ್‌ಗೆ ಲಾಟರಿ ಲಕ್ಷ್ಮಿ … ಒಲಿದಾಗ ಉಳಿದವರು ಸಂತೋಷದಿಂ… ತಮ್ಮ ನಾಮಪತ್ರಗಳನ್ನು ಹಿಂತೆಗೆದ…

(ಸೌಜನ್ಯ: 'ಹೊಸದಿಗಂತ')

ರೈತರಿಗಾಗಿ ಶ್ರಮಿಸುತ್ತಿರುವ ಆರ್.ಎಂ.ಸಿ.

(ಮೊದಲ ಪುಟದಿಂದ)

ನಡೆಸುವಂತೆ ಏರ್ಪಡಿಸಿರುವುದು .ಇತ್ಯಾದಿ ಇತ್ಯಾದಿ. ಇನ್ನೂ ಯಾವುದೇ ರೀತಿಯ ತೊಡಕುಗಳನ್ನಾಗಲಿ ಸಮಸ್ಯೆಗಳನ್ನಾಗಲಿ ರೈತರು ಸಮಿತಿಯ ಗಮನಕ್ಕೆ ತಂದಲ್ಲಿ ಕಾನೂನು ಚೌಕಟ್ಟಿನೊಳಗೆ ಅಂಥ ಎಲ್ಲವನ್ನೂ ಬಗೆಹರಿಸಲು ಸಮಿತಿ ಪ್ರಾಮಾಣಿಕವಾಗಿ ಯತ್ನಿಸುತ್ತದೆ.

ಮುಖ್ಯವಾಗಿ ರೈತರ ಹಿತ ರಕ್ಷಣೆಗಾಗಿಯೇ ಇರುವ ಈ ಸಮಿತಿ ರೈತರಿಗೆ ತೊಂದರೆ ಅಥವಾ ನಷ್ಟವಾಗುವಂಥ ಯಾವುದೇ ಕ್ರಮವನ್ನೂ ತೆಗೆದು ಕೊಳ್ಳುವುದಿಲ್ಲನೆಂಬುದನ್ನು ನಮ್ಮ ರೈತ ಸಮುದಾಯ ಅರ್ಥ ಮಾಡಿಕೊಳ್ಳುವುದೆಂದು ಆಶಿಸುತ್ತೇವೆ. ಅಂತೆಯೇ ದುರ್ಲಾಭಾಕಾಂಕ್ಷಿಗಳಾದ ವರ್ತಕರ (ಅಂಥವರು ಕೆಲವೇ ಜನರಿರಬಹುದು) ಪ್ರಚೋದನೆಗೆ ಬಲಿ ಬೀಳದೆ, ಸಮಿತಿಯ ಕ್ರಮಗಳನ್ನು ಬೆಂಬಲಿಸಿ, ಒಂದು ನ್ಯಾಯಯುತ ವಹಿವಾಟಿನ ವ್ಯವಸ್ಥೆ ಜಾರಿಗೆ ತರುವಲ್ಲಿ ಸಮಿತಿಗೆ ಸಹಕಾರ ನೀಡಬೇಕಾಗಿಯೂ ನಾನು ಸಮಿತಿಯ ಪರವಾಗಿ ಕೋರುತ್ತೇನೆ.

—ಕೆ.ಎನ್. ವೀರಪ್ಪ ಗೌಡ,
ಅಧ್ಯಕ್ಷರು, ವ್ಯವಸಾಯೋತ್ಪನ್ನಗಳ
ಮಾರುಕಟ್ಟೆ ಸಮಿತಿ, ಶಿವಮೊಗ್ಗ.

ಮತದಾರರಿಗೆ ಕೃತಜ್ಞತೆಗಳು

ದಿನಾಂಕ 2.1.1987ರಂದು ನಡೆದ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ನನಗೆ ಮತ ನೀಡಿದ ಎಲ್ಲಾ ಮತದಾರರಿಗೂ, ಶ್ರಮಿಸಿದ ಕಾರ್ಯಕರ್ತರಿಗೂ ಹಾಗೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಎಲ್ಲ ರೀತಿಯ ಸೇವೆ ನೀಡಿದವರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಭಾರತ ಕಮ್ಯುನಿಸ್ಟ್ ಪಕ್ಷ
ಕೊಪ್ಪ ಘಟಕದ ಪರವಾಗಿ,
ಎಚ್.ಆರ್. ರಾಮಚಂದ್ರ,
ಕಾರ್ಯದರ್ಶಿ.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳವರ ಕಛೇರಿ,
ಕ್ರ.ಸಂ.ಟಿಡಿಬಿ/ಸಿಆರ್ 75/86–87 ತಾಲ್ಲೂಕು ಅಭಿವೃದ್ಧಿ ಮಂಡಳಿ, ಕೊಪ್ಪ
ದಿನಾಂಕ 8.1.1987

ಪ್ರಕಟಣೆ

ಕೊಪ್ಪ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಕ್ಯಾಂಟೀನ್ ಹರಾಜು ಇಸ್ತಿಹಾರ್

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ ಕೊಪ್ಪ ಬಾಳಗಡಿ ಕಾಲೇಜ್ ಮುಂದುಗಡೆ ಕಟ್ಟಿರುವ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಕ್ಯಾಂಟೀನ್‌ಯನ್ನು ಬಾಡಿಗೆ ಮೇರೆಗೆ ದಿನಾಂಕ 14.1.87ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಕ್ಯಾಂಟೀನ್ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು.

ಹರಾಜು ಷರತ್ತುಗಳು:–

1. ತಾಲ್ಲೂಕು ಅಭಿವೃದ್ಧಿ ಮಂಡಳಿ ಕಛೇರಿಯಲ್ಲಿ ನಡೆಯುವ ಎಲ್ಲಾ ಹರಾಜುಗಳಿಗೂ ಅನ್ವಯಿಸುವ ಎಲ್ಲಾ ಷರತ್ತುಗಳು ಅನ್ವಯಿಸುತ್ತವೆ.
2. ಹರಾಜಿನಲ್ಲಿ ಭಾಗವಹಿಸುವರು ರೂ. 50 00(ಐವತ್ತು ರೂ. ಮಾತ್ರ) ಡಿಪಾಜಿಟ್ ಕಟ್ಟಿ ಹರಾಜಿಗೆ ಭಾಗವಹಿಸತಕ್ಕದ್ದು.
3. ಕಂಟ್ರಾಕ್ಟುದಾರರು ರಾಜಿಯಿಂದಾಗಲೀ ಅಥವಾ ಯಾವುದೇ ಕಾರಣದಿಂದಾಗಲೀ ಬೇರೆಯವರಿಗೆ ಹಕ್ಕನ್ನು ವರ್ಗಾಯಿಸಕೂಡದು. ಹಾಗೆ ಮಾಡಿದ್ದಲ್ಲಿ ಹರಾಜನ್ನು ರದ್ದು ಪಡಿಸಿ ಇನ್ನೊಂದು ಹರಾಜು ನಡೆಸಲಾಗುವುದು.
4. ಹರಾಜಿನ ಬಗ್ಗೆ ಬಿಡ್ಡುದಾರರಿಗೆ ಆಕ್ಷೇಪಣೆ ಬಂದಲ್ಲಿ ಮರು ಹರಾಜನ್ನು ಕರೆಯುವ ಹಕ್ಕನ್ನು ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಸೇರಿರುತ್ತೆ
5. ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಸೇರಿರುತ್ತೆ. ಮೇಲ್ಕಂಡ ಹರಾಜು 1959ನೇ ಕರ್ನಾಟಕ ವಿಪಿ ಮತ್ತು ಬೋರ್ಡ್ ಆಕ್ಟ್ ನಿಯಮಗಳಿಗೆ ಅನುಸರಿಸಿ ನಡೆಸಬಹುದಾಗಿರುತ್ತೆ.
6. ಆಖೈರು ಬಿಡ್ಡುದಾರರು ತಾಲ್ಲೂಕು ಅಭಿವೃದ್ಧಿ ಮಂಡಳಿ ನಿಧಿಗೆ ರೂ. 2,000 (ಎರಡು ಸಾವಿರ) ಡಿಪಾಜಿಟ್ ಇಡತಕ್ಕದ್ದು.

ಸಹಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ತಾಲ್ಲೂಕು ಅಭಿವೃದ್ಧಿ ಮಂಡಳಿ, ಕೊಪ್ಪ.

ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ

ಕೊಪ್ಪ, ಚಿಕ್ಕಮಗಳೂರು ಜಿಲ್ಲೆ

ಮಾನ್ಯ ಸದಸ್ಯ ರೈತ ಬಾಂಧವರೆ,

ತಮಗೆ ಹೊಸ ವರ್ಷದ ಶುಭಾಶಯಗಳು

ತಾವೀಗ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳ ಬಿಸಿ ವಾತಾವರಣದಲ್ಲಿ ಗುರುತರ ಜವಾಬ್ದಾರಿ ಕಾರ್ಯದಲ್ಲಿ ಮಗ್ನರಾಗಿರಬಹುದು ಈ ಚುನಾವಣೆಗಳು ಒಂದು ಅಪೂರ್ವ ಸನ್ನಿವೇಶವೆಂಬುದೇನೋ ನಿಜ.

ಅಂತೆಯೇ ತಮಗೆ ತಿಳಿದಿರುವಂತೆ, ನಮ್ಮ ಬ್ಯಾಂಕಿನ ಕಂತು ಮರುಪಾವತಿಯ ಅವಧಿಯೂ ಇದೇ ಜನವರಿ 31 ಆಗಿದ್ದು, ಚುನಾವಣೆಗಳ ಈ ಬಿಸಿ ವಾತಾವರಣದಲ್ಲಿಯೂ ಕೂಡ ತಾವು ತ್ವರೆ ಮಾಡಿ, ಜನವರಿ 31ರೊಳಗೆ ತಮ್ಮ ಸಾಲಗಳ ಕಂತು ಪಾವತಿ ಮಾಡಿ ಸರ್ಕಾರದ ಬಡ್ಡಿ ರಿಯಾಯ್ತಿಯನ್ನು ಪಡೆದು ಆರ್ಥಿಕ ಲಾಭ ಪಡೆಯುವುದರ ಜೊತೆಗೆ, ತಮ್ಮ ಮುಂದಿನ ವ್ಯವಹಾರಕ್ಕೂ ಹಾಗೂ ಇತರೆ ರೈತರಿಗೂ ಹೆಚ್ಚಿನ ರೀತಿಯಲ್ಲಿ ಸಾಲ ನೀಡುವಲ್ಲಿ ತಮ್ಮ ಪಾತ್ರ ಹಿರಿದಾಗಿರುತ್ತೆ.

"ಬ್ಯಾಂಕಿನ ಪುರೋಭಿವೃದ್ಧಿಯೇ
ತಮ್ಮ ಶ್ರೇಯೋಭಿವೃದ್ಧಿ."

ವಂದನೆಗಳೊಂದಿಗೆ, ತಮ್ಮ ವಿಶ್ವಾಸಿಗಳು,

ಎ.ಎಂ. ಜಯದೇವಪ್ಪ, ಬಿ.ಕಾಂ
ಕಾರ್ಯದರ್ಶಿ.

ಕೋಣೆಗದ್ದೆ ಪದ್ಮನಾಭ
ಅಧ್ಯಕ್ಷ.

ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳವರ ಕಛೇರಿ,
ಕ್ರ.ಸಂ. ಟಿಡಿಬಿ/ಸಿಆರ್75/86–87 ತಾಲ್ಲೂಕು ಅಭಿವೃದ್ಧಿ ಮಂಡಳಿ, ಕೊಪ್ಪ
ದಿನಾಂಕ 8.1.87

ಪ್ರಕಟಣೆ

ಕೊಪ್ಪ ತಾಲ್ಲೂಕು ಅಭಿವೃದ್ಧಿ ಮಂಡಳಿಯ, ಜಯಪುರ ಬಸ್ ನಿಲ್ದಾಣದ ಅಂಗಡಿ ಮಳಿಗೆಗಳನ್ನು ಹರಾಜು ಮಾಡುವ ಕುರಿತು :—

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ, ಕೊಪ್ಪ ತಾಲ್ಲೂಕು ಜಯಪುರ ಬಸ್ ನಿಲ್ದಾಣದ ಅಂಗಡಿ ಮಳಿಗೆಗಳನ್ನು ಬಾಡಿಗೆ ಮೇರೆಗೆ ಕೊಡಲು ದಿನಾಂಕ 14.1.87ರಂದು ಅಪರಾಹ್ನ 3.00 ಗಂಟೆಗೆ ಬಸ್ ನಿಲ್ದಾಣದ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು.

ಹರಾಜು ಶರತ್ತುಗಳು

1) ತಾಲ್ಲೂಕು ಅಭಿವೃದ್ಧಿ ಮಂಡಳಿ ಕಚೇರಿಯಲ್ಲಿ ನಡೆಯುವ ಎಲ್ಲಾ ಹರಾಜುಗಳಿಗೂ ಅನ್ವಯಿಸುವ ಎಲ್ಲಾ ಶರತ್ತುಗಳು ಅನ್ವಯಿಸುತ್ತವೆ.

2) ಕಂಟ್ರಾಕ್ಟುದಾರರು ರಾಜಿಯಿಂದಾಗಲಿ ಅಥವಾ ಯಾವುದೇ ಕಾರಣದಿಂದಾಗಲಿ ಬೇರೆಯವರಿಗೆ ಹಕ್ಕನ್ನು ವರ್ಗಾಯಿಸಕೂಡದು. ಹಾಗೆ ಮಾಡಿದಲ್ಲಿ ಹರಾಜನ್ನು ರದ್ದುಪಡಿಸಿ ಇನ್ನೊಂದು ಹರಾಜನ್ನು ನಡೆಸಲಾಗುವುದು.

3) ಹರಾಜಿನಲ್ಲಿ ಭಾಗವಹಿಸುವವರು ರೂ. 50–00 (ರೂಪಾಯಿ ಐವತ್ತು ಮಾತ್ರ) ಡಿಪಾಜಿಟ್ ಕಟ್ಟಿ ಹರಾಜಿನಲ್ಲಿ ಭಾಗವಹಿಸಬಹುದು.

4) ಹರಾಜಿನ ಬಗ್ಗೆ ಬಿಡ್ಡುದಾರರಿಗೆ ಆಕ್ಷೇಪಣೆ ಬಂದಲ್ಲಿ ಮರು ಹರಾಜನ್ನು ಕರೆಯುವ ಹಕ್ಕು ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಸೇರಿರುತ್ತೆ.

5) ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಸೇರಿರುತ್ತೆ. ಮೇಲ್ಕಂಡ ಹರಾಜನ್ನು 1959ನೇ ಕರ್ನಾಟಕ ವಿ ಪಿ ಮತ್ತು ಬೋರ್ಡ್ ಆಕ್ಟ್ ನಿಯಮಗಳನುಸಾರ ನಡೆಸಬಹುದಾಗಿರುತ್ತೆ.

6) ಆಖೈರು ಬಿಡ್ಡುದಾರರು ತಾಲ್ಲೂಕು ಅಭಿವೃದ್ಧಿ ಮಂಡಳಿ ನಿಧಿಗೆ ರೂ. 2000.00 (ಎರಡು ಸಾವಿರ ಮಾತ್ರ) ಡಿಪಾಜಿಟ್ ಇಡತಕ್ಕದ್ದು.

ಸಹಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ತಾಲ್ಲೂಕು ಅಭಿವೃದ್ಧಿ ಮಂಡಳಿ, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಿಕೆಗೆ ಅಚ್ಚುಕೂಟ, ಕೊಪ್ಪ